ಓ.ಎಸ್. ನಂಃ **251/2013**
ಪಿ <u>ಡಬ್ಲ್ಯೂಃ **2**</u>

ದಿನಾಂಕಃ 22-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **10** ಮತ್ತು **11** ನೇ ಪ್ರತಿವಾದಿಯ ಪರ ಶ್ರೀ ಜಿ.ಎಸ್.ಎನ್ ವಕೀಲರಿಂದಃ</u>

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿಗೆ ಅವರ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿನ ಅಂಶಗಳನ್ನು ಯಾರು ಹೇಳಿನ ಬರೆಸಿದ್ದಾರೆ ಎಂದರೆ ಸಾಕ್ಷಿಯು ವಾದಿಯ ಪರ ವಕೀಲರು ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿ ಹಣಮಂತ ರವರು ಪ್ರತಿವಾದಿಯರಾದ ವಿಠಲರಾವ್ ಹಾಗೂ ಮಾಣಿಕ್ ರಾವ್ ರವರ ವಿರುದ್ದ ದಾಖಲಿಸಿದ್ದಾರೆ. ಮೃತ 1 ನೇ ಪ್ರತಿವಾದಿ ಅವರುಗಳಿಗೆ ಭೂಮಿ ಮಾರಾಟ ಮಾಡಿಲ್ಲ, ಅದಕ್ಕಾಗಿ ವಾದಿ ದಾವೆ ದಾಖಲಿಸಿದ್ದಾರೆ. ಸರ್ವೆ ನಂ.611-610 ರ ಜಮೀನಿಗೆ ಸಬಂಧಿಸಿದಂತೆ ದಾವೆ ದಾಖಲಿಸಿದ್ದಾರೆ. ಸದರಿ ಒಂದು ಜಮಿನಿಗೆ ಮಾತ್ರ ವಾದಿ ದಾವೆ ದಾಖಲು ಮಾಡಿದ್ದಾರೆ. ದಾವಾ ಜಮೀನು ಅಂದಾಜು 01 ಎಕರೆ 21 ಗುಂಟೆ ಇರಬಹುದು. ಸದರಿ ಜಮೀನನ್ನು 1 ನೇ ಪ್ರತಿವಾದಿ ಯಾರಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಆತನ ಹಿರಿಯರ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ದಾವಾ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿದ್ದೇನೆ. ಯಾವ ವರ್ಷದ ಪಹಣಿ ಪತ್ರಿಕೆಯನ್ನು ನೋಡಿದ್ದೀರಿ ಎಂದರೆ ಸಾಕ್ಷಿಯು ನನಗೆ ಅಷ್ಟೊಂದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

2. 1 ನೇ ಪ್ರತಿವಾದಿಗೆ ಮೂರು ಜನ ಮಕ್ಕಳಿದ್ದಾರೆ. ವಾದಿ ಹಾಗೂ 2 ಮತ್ತು 8 ನೇ ಪ್ರತಿವಾದಿಯರು 1 ನೇ ಪ್ರತಿವಾದಿಯ ಸದರಿ ಮೂರು ಜನ ಮಕ್ಕಳಾಗಿರುತ್ತಾರೆ. ನಾನು ಅಶೋಕ ನಗರ ತಾಂಡಾದಲ್ಲಿ ವಾಸವಾಗಿದ್ದೇನೆ. ನಾನು ಅದೇ ತಾಂಡಾದಲ್ಲಿ ಹುಟ್ಟಿ-ಬೆಳೆದಿರುತ್ತೇನೆ. 1 ನೇ ಪ್ರತಿವಾದಿ ಆತನ ಕುಟುಂಬದ ಮುಖ್ಯಸ್ಥ ಆಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಕುಟುಂಬದ ಎಲ್ಲ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತಿದ್ದರು ಎಂದರೆ ಸಾಕ್ಷಿಯು ಸರಿ, ಆದರೆ ವಾದಿ ಹಾಗೂ 2 ನೇ ಪ್ರತಿವಾದಿ ಮುಂಬೈಗೆ ದುಡಿಯಲು ಹೋಗಿದ್ದರು ಎಂದು ನುಡಿಯುತ್ತಾರೆ. 10-12 ವರ್ಷಗಳ ಕಾಲ ಅವರು ಮುಂಬೈಯಲ್ಲಿ

ಇದ್ದರು. 1 ನೇ ವಾದಿ 16-18 ವರ್ಷ ಹಾಗೂ 2 ನೇ ಪ್ರತಿವಾದಿ 20-22 ವರ್ಷ ವಯಸ್ಸಿನವರು ಇದ್ದಾಗ ಮುಂಬೈಗೆ ದುಡಿಯಲು ಹೋಗಿದ್ದರು. ಅವರುಗಳು ಮುಂಬೈಗೆ ಅಥವಾ ಬೇರೆ ಎಲ್ಲೂ ದುಡಿಯಲು ಹೋಗಿಲ್ಲ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿ ತನ್ನ ಕುಟುಂಬದ ಅವಶ್ಯಕತೆಗಳಿಗಾಗಿ 1994-95 ರಲ್ಲಿ ದಾವಾ ಸರ್ವೆ ನಂ.610-611 ರ 20 ಗುಂಟೆ ಜಮೀನನ್ನು 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದಗೆ ನನಗೆ ಗೊತ್ತಿಲ್ಲ. ಅದೇ ಪ್ರಕಾರ 1 ನೇ ಪ್ರತಿವಾದಿ ಸದರಿ ಮಾರಾಟವಾದ ಜಮೀನಿನ ಸ್ವಾದೀನವನ್ನು 9 ನೇ ಪ್ರತಿವಾದಿಗೆ ವಹಿಸಿಕೊಟ್ಟಿದ್ದರು ಎಂದರೆ ಸಾಕ್ಷಿಯು ವಾದಿಯ ಕುಟುಂಬದವರೇ ಸ್ವಾದೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ನಂತರ ಸದರಿ 20 ಗುಂಟೆ ಜಮೀನನ್ನು 9 ನೇ ಪ್ರತಿವಾದಿ ದಿಃ 01.08.2007 ರಂದು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 10 ನೇ ಪ್ರತಿವಾದಿಯೇ ಸದರಿ ಜಮೀನಿನ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

4. ಆ ನಂತರ ದಿಃ 07.04.1995 ರಂದು 1 ನೇ ಪ್ರತಿವಾದಿ 20 ಗುಂಟೆ ಜಮೀನನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಕಂದಾಯ ದಾಖಲೆಗಳಲ್ಲಿ 11 ನೇ ಪ್ರತಿವಾದಿಯ ಹೆಸರು ನಮೂದಗಿದ್ದು ಆತ ಜಮೀನು ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಮಕ್ಕಳು ಚಿಕ್ಕವರಿದ್ದಾಗ ಕುಟುಂಬದ ಅಡಚಣೆಗಾಗಿ ಸದರಿ ಜಮೀನಿನನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.610-611 ರ ಜಮೀನನ್ನು 1 ನೇ ಪ್ರತಿವಾದಿ ಸ್ವತಃ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ, ಆತನ ಹಿರಿಯರ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆದರೆ ಸರಿಯಲ್ಲ.

**ಪಾಟೀ ಸವಾಲುಃ 7 ರಿಂದ 18 ನೇ ಪ್ರತಿವಾದಿಯ ಪರ ಶ್ರೀ ಐ.ಎಂ.ಆರ್ ವಕೀಲರಿಂದಃ**

5. ವಾದಿ ನನ್ನ ದೂರದ ಸಂಬಂಧಿಕ ಆಗಿರುತ್ತಾನೆ. ದಾವಾ ಸರ್ವೆನಂ.610-611 ರ ಜಮೀನು ಮೂಲತಃ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದ್ದಿರಬಹುದು ಎಂದು ನುಡಿಯುತ್ತಾರೆ. 1 ನೇ

ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇರುವ ಪಹಣಿಯನ್ನು ನಾನು ನೋಡಿದ್ದೇನೆ. ಯಾವ ವರ್ಷದಲ್ಲಿ ಅವರ ಹೆಸರಿನಲ್ಲಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ನಂತರ ವಾದಿಯ ಹೆಸರಿಗೆ ಯಾವಾಗ ವರ್ಗಾವಣೆ ಆಗಿದೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಜಮೀನು 1 ನೇ ಪ್ರತಿವಾದಿಯ ಹಿರಿಯರ ಆಸ್ತಿ ಆಗಿರುತ್ತದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. 1 ನೇ ಪ್ರತಿವಾದಿಗೆ ಒಟ್ಟು 07 ಜನ ಮಕ್ಕಳಿದ್ದಾರೆ. 1 ನೇ ಪ್ರತಿವಾದಿಯೇ ಆತನ ಕುಟುಂಬದ ಹಿರಿಯ ಆಗಿದ್ದರು ಎಂದರೆ ಸರಿ. ಮನೆಗೆ ಸಂಬಂಧಿಸಿದ ಎಲ್ಲ ಕೊಡುವ-ತೆಗೆದುಕೊಳ್ಳುವ ವ್ಯವಹಾರಗಳನ್ನು 1 ನೇ ಪ್ರತಿವಾದಿಯೇ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಗೆ ಕೃಷಿ ಆದಾಯ ಹೊರತು ಪಡಿಸಿ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಆಗ ಕೃಷಿಯಿಂದ ವಾರ್ಷಿಕ ರೂ.2-3 ಸಾವಿರ ಆದಾಯ ಬರುತ್ತಿತ್ತು. ಸದರಿ ಆದಾಯ ಅವರ ಕುಟುಂಬ ನಿರ್ವಹಣೆಗೆ ಸಾಲುತ್ತಿರಲಿಲ್ಲ ಎಂದರೆ ಸಾಕ್ಷಿಯು ಆತನ ಮಕ್ಕಳು ಮುಂಬೈಯಲ್ಲಿ ದುಡಿಯುತ್ತಿದ್ದರು ಎಂದು ನುಡಿಯುತ್ತಾರೆ. 1997 ರಲ್ಲಿ ವಾದಿಗೆ 18 ವರ್ಷ ಹಾಗೂ 2 ನೇ ಪ್ರತಿವಾದಿಗೆ 20 ವರ್ಷ ವಯಸ್ಸು ಇದ್ದಿರಬಹುದು. ಆಗ ವಾದಿ ಅಪ್ರಾಪ್ತ ವಯಸ್ಕನಾಗಿದ್ದನು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಕುಟುಂಬದ ಅಡಚಣೆಗಾಗಿ ದಾವಾ ಸರ್ವೆನಂ.610-611 ರಲ್ಲಿನ 22 ಗುಂಟೆ ಜಮೀನನ್ನು 12 ರಿಂದ 18 ನೇ ಪ್ರತಿವಾದಿಯರ ತಾಯಿ ಚಂದಮ್ಮ ರವರಿಗೆ ದಿಃ 26.09.1997 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆತ ಮಾರಾಟ ಮಾಡಿರುವುದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ರೂ.5,500/- ಹಣ ಪಡೆದುಕೊಂಡು ಖರೀದಿ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅವರ ಹತ್ತಿರವೇ ಇರುತ್ತಿದ್ದನು ಹಾಗಾಗಿ ಬರೆಸಿಕೊಂಡಿರಬಹುದು ಎಂದು ನುಡಿಯುತ್ತಾರೆ. ಖರೀದಿ ಪತ್ರಕ್ಕೆ 2 ನೇ ಪ್ರತಿವಾದಿಯೂ ಸಹ ಸಹಿ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಆದಾಗಿನಿಂದ 12 ರಿಂದ 18 ನೇ ಪ್ರತಿವಾದಿಯರ ತಾಯಿ ಸದರಿ ಜಮೀನು ಸ್ವಾದೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ಚಂದಮ್ಮ ರವರ ಹೆಸರಿಗೆ ಖಾತಾ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ಆತ ಸಹಿ ಮಾಡಿರಬಹುದು ಹಾಗಾಗಿ ಖಾತಾ ವರ್ಗಾವಣೆ ಆಗಿರಬಹುದು ಎಂದು ನುಡಿಯುತ್ತಾರೆ. ಚಂದಮ್ಮ ತೀರಿಕೊಂಡ ನಂತರ 12 ರಿಂದ 18 ನೇ ಪ್ರತಿವಾದಿಯರು ಸದರಿ ಜಮೀನು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ,

ವಾದಿ ಸ್ವಾಧೀನದಲ್ಲಿ ಇದ್ದು ಕೊಳವೆ ಬಾವಿ ಸಹ ಕೊರೆಸಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಸ್ವಾಧೀನದಲ್ಲಿ ಇದ್ದಾನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ನಂತರ 12 ರಿಂದ 18 ನೆ ಪ್ರತಿವಾದಿಯರ ಹೆಸರಿಗೆ ಖಾತಾ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಕುಟುಂಬದ ಅಡಚಣೆಗಾಗಿ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಆತ ಮಾರಾಟ ಮಾಡಿದ ವಿಷಯ ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಒಳ್ಳೆಯ ಸ್ಥಿತಿವಂತರಾಗಿದ್ದರು ಎಂದು ಸುಳ್ಳು ಅಂಶ ಬರೆಸಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾರಿಗೂ ಜಮೀನು ಮಾರಾಟ ಮಾಡಿಲ್ಲ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೀರಿ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಅವರ ಹತ್ತಿರವೇ ಇರುತ್ತಿದ್ದನು ಹಾಗಾಗಿ ಹಿಡಿದು ಹೆಬ್ಬೆಟ್ಟು ಒತ್ತಿಸಿಕೊಂಡಿರಬಹುದು ಎಂದು ನುಡಿಯುತ್ತಾರೆ. 9 ರಿಂದ 19 ನೇ ಪ್ರತಿವಾದಿಯರು ಖೊಟ್ಟಿ ದಾಖಲೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಖರೀದಿಯಾದಾಗಿನಿಂದ ಚಂದಮ್ಮ ರವರು ಹಾಗೂ ಅವರ ಮರಣದ ನಂತರ ಅವರ ಮಕ್ಕಳು ಜಮೀನು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಹಾಗೂ 1 ರಿಂದ 8 ನೇ ಪ್ರತಿವಾದಿಯರು ದಾವಾ ಆಸ್ತಿ ಉಪಭೋಗ ಮಾಡುತ್ತಿದ್ದಾರೆ ಎಂದು ಸುಳ್ಳು ಅಂಶ ಬರೆಸಿದ್ದೆನೆಂದರೆ ಸರಿಯಲ್ಲ. ವಾದಿ ಹಾಗೂ 2 ರಿಂದ 8 ನೇ ಪ್ರತಿವಾದಿಯರಿಗೆ ತನ್ನ ತಂದೆ ಮಾರಾಟ ಮಾಡಿರುವ ವಿಷಯ ಗೊತ್ತಿದ್ದರಿಂದ ಅವರು ಯಾವುದೇ ಕಾನೂನು ಕ್ರಮ ಜರುಗಿಸಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಜೀವಿತಾವದಿಯಲ್ಲಿ ಖರೀದಿ ಪತ್ರ ಖೊಟ್ಟಿ ಇರುತ್ತದೆ ಎಂದು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆತ ಬೇರೆ ನ್ಯಾಯಾಲಯದಲ್ಲಿ ಹೇಳಿ ನಂತರದ ದಿನಗಳಲ್ಲಿ ಮರಣಹೊಂದಿರುತ್ತಾನೆ ಎಂದು ನುಡಿಯುತ್ತಾರೆ.

7. 1997 ರಲ್ಲಿ ಜಮೀನುಗಳ ಬೆಲೆ ಕಡಿಮೆ ಇತ್ತು ಎಂದರೆ ಸರಿ. ಈಗ ಜಮೀನುಗಳ ಬೆಲೆ ಹೆಚ್ಚಾಗಿರುತ್ತದೆ ಎಂದರೆ ಸರಿ. ಆಸ್ತಿ ಬೆಲೆ ಹೆಚ್ಚಾಗಿದ್ದರಿಂದ ವಾದಿ ಸುಳ್ಳು ದಾವೆ ದಾಖಲಿಸಿದ್ದು ನಾನು ಆತನ ಪರವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಮೀನು ಮಾರಾಟ ಮಾಡಿರುವ ವಿಷಯ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ